**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.470/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ. ವಿಜಯಲಕ್ಷ್ಮೀ | ಪ್ರಾಸಾ-6 |
| ಗಂಡನ ಹೆಸರು | : ಡಾ.ಉಮೇಶ್ ಭಟ್ | ಚಾಸಾ-12 |
| ವಯಸ್ಸು | : 49 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಗೈನಾಕಲಾಜಿಸ್ಟ್ | ದಿನಾಂಕಃ11.02.2026 |
| ವಾಸಸ್ಥಳ | : ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು | |

**:ಮುಖ್ಯ ವಿಚಾರಣೆಃ ಪ್ರಾಙ್ಞ್ಯಾ ಸ.ಸ.ಅ. ರವರಿಂದ:**

ನಾನು ಆಗಸ್ಟ್ 2015 ರಿಂದ ಜುಲೈ 2025 ರವರೆಗೂ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.03.12.2023 ರಂದು ರಾ.11.00 ರ ಸಮಯಕ್ಕೆ ಚಾಸಾ-1 ರವರು ರಸ್ತೆ ಅಪಘಾತವಾದ ಹಿನ್ನಲೆಯಲ್ಲಿ ಚಿಕಿತ್ಸೆಗೆಂದು ಸಾರ್ವಜನಿಕ ಆಸ್ಪತ್ರೆ, ಮೂಡಿಗೆರೆಗೆ ಬಂದಿರುತ್ತಾರೆ. ನಂತರ ಅವರನ್ನು ಪರೀಕ್ಷಿಸಲಾಗಿ, ಎಡಮೊಣಕೈ ನಲ್ಲಿ ನೋವು ಮತ್ತು ಊತ ಹಾಗೂ ಬಲಮೊಣಕೈ ಮೇಲೆ ನೋವು ಮತ್ತು ಊತ, ಎಡಗಣ್ಣಿನ ಹತ್ತಿರ ನೋವು ಮತ್ತು ಊತ ಹಾಗೂ ಮೂಗಿನಿಂದ ರಕ್ತಸ್ರಾವವಾಗುತ್ತಿತ್ತು. ಸದರಿಯವರಿಗೆ ನಾನು ಚಿಕಿತ್ಸೆಯನ್ನು ನೀಡಿ ಜಿಲ್ಲಾ ಆಸ್ಪತ್ರೆ ಚಿಕ್ಕಮಗಳೂರಿಗೆ ಕಳುಹಿಸಿರುತ್ತೇನೆ. ಜಿಲ್ಲಾ ಆಸ್ಪತ್ರೆ ಚಿಕ್ಕಮಗಳೂರು ರವರ ವರದಿಯ ಪ್ರಕಾರ ಚಾಸಾ-1 ರವರ ಎರಡೂ ಕೈಗಳ Radious bone ಗಳು ಮುರಿದಿರುವ ಬಗ್ಗೆ ತಿಳಿದು ಬಂದಿರುತ್ತದೆ. ನಂತರ ಸಿಟಿ ಸ್ಕ್ಯಾನ್ ನಲ್ಲಿ ಎಡಭಾಗದ ಎಡ ಕಣ್ಣಿನ ಕೆಳಭಾಗದ ಮೂಳೆ ಮುರಿದಿರುವ ಬಗ್ಗೆ ತಿಳಿದು ಬಂದಿರುತ್ತದೆ. ಚಾಸಾ-1 ರವರಿಗೆ ಆಗಿರುವ 1 ಮತ್ತು 2 ನೇ ಗಾಯಗಳು ತೀವ್ರ ಸ್ವರೂಪದ ಗಾಯಗಳಾಗಿದ್ದು, 3 ಮತ್ತು 4 ನೇ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ.

ಸಾಕ್ಷಿಯು ದಿ.03.12.2023 ರಂದು ನೀಡಿದ ಗಾಯದ ಪ್ರಮಾಣ ಪತ್ರವನ್ನು ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರಮಾಣ ಪತ್ರವನ್ನು ನಿಪಿ-12 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಆರ್.ಟಿ ವಕೀಲರು ಶ್ರೀ ಎಸ್.ಡಿ. ವಕೀಲರ ಪರವಾಗಿಃ**

ನಾನು ಠಾಣೆಗೆ ಎಮ್.ಎಲ್.ಸಿ ವರದಿಯನ್ನು ಕಳುಹಿಸಿರುತ್ತೇನೆ. ಚಾಸಾ-1 ರವರು ಹೇಳಿಕೆಯನ್ನು ಪೋಲಿಸರು ನನ್ನ ಮುಂದೆ ದಾಖಲಿಸಿಕೊಂಡಿರುವ ಬಗ್ಗೆ ನನಗೆ ನೆನಪಾಗುತ್ತಿಲ್ಲ. ಚಾಸಾ-1 ರವರಿಗೆ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಚಾಸಾ-1 ರವರಿಗೆ ತೀರ್ವ ಸ್ವರೂಪದ ಗಾಯಗಾಳಾಗಿವೆ ಎಂದು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ

ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.470/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಚಂದ್ರಶೇಖರ್ ಪಿ. | ಪ್ರಾಸಾ-7 |
| ತಂದೆಯ ಹೆಸರು | : ಪುಟ್ಟಯ್ಯ | ಚಾಸಾ-14 |
| ವಯಸ್ಸು | : 52 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಎ.ಎಸ್.ಐ | ದಿನಾಂಕಃ11.02.2026 |
| ವಾಸಸ್ಥಳ | : ಟ್ರಾಫಿಕ್ ಪೋಲಿಸ್ | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನಾನು 2019 ರಿಂದ 2025 ರವರೆಗೂ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.20.12.2023 ರಂದು ನಾನು ಠಾಣಾ SHO ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರವರು ಬೆ.10.10 ಕ್ಕೆ ನೀಡಿದ ದೂರನ್ನು ಸ್ವೀಕರಿಸಿಕೊಂಡಿರುತ್ತೇನೆ. ನಂತರ ಠಾಣಾ ಮೊ.ನಂ.183/2023 ರ ಕಲಂ 279, 337 Of IPC ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಬೆ.11.00 ರ ಸಮಯಕ್ಕೆ ಚಾಸಾ-11 ರವರ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಸ.4.00 ರ ಸಮಯಕ್ಕೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ ಸ್ಥಳದಲ್ಲಿದ್ದ ಚಾಸಾ-2 ಮತ್ತು 3 ರವರಿಗೆ ಪ್ರಕರಣದ ಮಾಹಿತಿಯನ್ನು ತಿಳಿಸಿ ಪಂಚರಾಗಿ ಹಾಜರಾಗಲು ಕೋರಿಕೊಂಡಿದ್ದು, ಅವರು ಒಪ್ಪಿದ ಮೇರೆಗೆ ಮಹಜರ್ ಕ್ರಮವನ್ನು ಸ.4.00 ರಿಂದ 5.00 ರವರೆಗೂ ಜರುಗಿಸಿರುತ್ತೇನೆ. ದಿ.22.12.2023 ರಂದು ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷಿದಾರರಾದ ಚಾಸಾ-6 ರಿಂದ 9 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.03.01.2024 ರಂದು ಬೆ.11.00 ರ ಸಮಯದಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪಘಾತಕ್ಕೀಡಾದ KSRTC ಬಸ್ ಸಂಖ್ಯೆ KA-06-F-1215 ಮತ್ತು ಬಜಾಜ್ ಡಿಸ್ಕೋವರಿ ಬೈಕ್ KA-18-X-6792 ನ್ನು ತಂದು ಹಾಜರುಪಡಿಸಿದ ಮೇರೆಗೆ ಪೊಲೀಸ್ ವಸತಿ ಗೃಹದ ಎಡಬದಿಗೆ ಇರುವ ಕೃಷ್ಣಪ್ಪಗೌಡ ರಸ್ತೆಯಲ್ಲಿ ಅಮಾನತುಪಡಿಸಿಕೊಂಡಿರುತ್ತೇನೆ. ನಂತರ ಮಾನ್ಯ ಘನ ನ್ಯಾಯಾಲಯಕ್ಕೆ ಪಿ.ಎಫ್ ನ್ನು ಸಲ್ಲಿಸಿ, IMV ವರದಿ ಬಂದ ನಂತರ ಆರ್.ಸಿ ಓನರ್ ಗೆ ಬಿಟ್ಟುಕೊಡುವಂತೆ ಕೋರಿ ಕೊಂಡಿರುತ್ತೇನೆ.

ಅದೇ ದಿನ ಚಾಸಾ-13 ರವರಿಗೆ ವಾಹನವನ್ನು ಪರಿಶೀಲಿಸಿ ವರದಿಯನ್ನು ನೀಡುವಂತೆ ಕೋರಿ ಮನವಿಯನ್ನು ಮಾಡಿಕೊಂಡಿರುತ್ತೇನೆ. ಮಹಜರ್ ಮತ್ತು ಪಿ.ಎಫ್ ನ್ನು ಹಾಕಿದ ಸಮಯದಲ್ಲಿ ಸಿಡಿಯನ್ನು ಹಾಜರುಪಡಿಸಿರುತ್ತೇನೆ. ದಿ.04.01.2024 ರಂದು ಮೂಡಿಗೆರೆಯ KSRTC ಯ ಚಂದ್ರಶೇಖರ್ ನೀಲಗುಂದ, ಸಂಚಾರ ನಿಯಂತ್ರಕರು ರವರಿಗೆ ಅಪಘಾತಕ್ಕೀಡಾದ KSRTC ಬಸ್ ನ ದಾಖಾಲತಿಗಳನ್ನು ಹಾಜರುಪಡಿಸುವಂತೆ ಮತ್ತು ಆ ದಿನ ಸದರಿ ವಾಹನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವ್ಯಕ್ತಿಯ ವಿವರವನ್ನು ನೀಡುವಂತೆ ಮನವಿಯನ್ನು ಮಾಡಿಕೊಂಡಿರುತ್ತೇನೆ. ಅದೇ ದಿನ ಸದರಿಯವರು ಠಾಣೆಗೆ ಹಾಜರಾಗಿ ನಾನು ಕೋರಿಕೊಂಡ

ದಾಖಲಾತಿಗಳನ್ನು ಮತ್ತು ವಾಹನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವ್ಯಕ್ತಿಯನ್ನು ಹಾಜರುಪಡಿಸಿರುತ್ತಾರೆ. ವಾಹನವನ್ನು ಚಾಲಾಯಿಸುತಿದ್ದ ವ್ಯಕ್ತಿಯ ಹೆಸರು ಶಿವಲಿಂಗಯ್ಯ ಬಿನ್ ಗೌಡಯ್ಯ ಎಂಬುದು ಕಂಡಬುಂದಿರುತ್ತದೆ. ನಂತರ ಸದರಿ ವ್ಯಕ್ತಿಗೆ ಕಲಂ 41 ಎ ರಡಿಯಲ್ಲಿ ನೋಟೀಸನ್ನು ಜಾರಿ ಮಾಡಿರುತ್ತೇನೆ. ಅದೇ ದಿನ IMV ವರದಿಯನ್ನು ನೀಡಿದ ಮೇರೇಗೆ ನಷ್ಟಭರ್ತಿ ಪರಿಹಾರ ಪ್ರತಿಯನ್ನು ಪಡೆದು KSRTC ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ದಿ.02.02.2024 ರಂದು ಚಾಸಾ-12 ರವರಿಂದ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ದಿ.05.02.2024 ರಂದು IMV ವರದಿಯನ್ನು ಚಾಸಾ-13 ರವರಿಂದ ಪಡೆದುಕೊಂಡಿರುತ್ತೇನೆ. ದಿ.06.02.2024 ರಂದು ಆರೋಪಿಗಳ ವಿರುದ್ಧ ಆರೋಪವು ಸಾಬೀತಾದ ಕಾರಣ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ.

ಸಾಕ್ಷಿಯು ನಿಪಿ-1, 2, 3, 6, 7 ಮತ್ತು 9, ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಬಿ), 2(ಬಿ), 3(ಸಿ), 6(ಎ), 7(ಎ) ಮತ್ತು 9(ಎ), ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.03.01.2024 ರಂದು ಪ್ರಾದೇಶಿಕ ಅಧಿಕಾರಿಗಳು, ಸಾರಿಗೆ ಇಲಾಖೆಯವರಿಗೆ ನೀಡಿದ ಮನವಿ ಪತ್ರ ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಸದರಿ ಮನವಿ ಪ್ರತಿಯನ್ನು ನಿಪಿ-13 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ದಿ.04.01.2024 ರಂದು ತುಮಕೂರು ಘಟಕದವರಿಂದ ಮೂಡಿಗೆರೆ ಘಟಕದವರಿಗೆ ನೀಡಿದ ಅಧಿಕಾರ ಪತ್ರವನ್ನು ನಿಪಿ-14 ಎಂದು ಗುರುತಿಸಲಾಯಿತು. ದಿ.04.01.2024 ರಂದು ತುಮಕೂರು KSRTC ವಿಭಾಗದ ವ್ಯವಸ್ಥಾಪಕ ನಿರ್ದೇಶಕರು ಮೂಡಿಗೆರೆ ಪೋಲಿಸ್ ಠಾಣೆಗೆ ನೀಡಿದ ಮನವಿಗೆ ಉತ್ತರಿಸಿದ ಪ್ರತಿಯೊಂದಿಗೆ ದಾಖಲಾತಿಗಳನ್ನು ಒಟ್ಟಾಗಿ ನಿಪಿ-15 ಎಂದು ಗುರುತಿಸಲಾಯಿತು. ಅದೇ ದಿನ ಮೂಡಿಗೆರೆ KSRTC ವಿಭಾಗದಿಂದ ಪಡೆದ ನಷ್ಟ ಭರ್ತಿ ಪರಿಹಾರ ಪ್ರತಿಯನ್ನು ನಿಪಿ-16 ಎಂದು ಗುರುತಿಸಲಾಯಿತು. ಚಾಸಾ-13 ರವರಿಂದ ಪಡೆದ IMV ವರದಿಯನ್ನು ನಿಪಿ-17 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಡಿ. ವಕೀಲರಿಂದಃ**

ದಿ.03.12.2023 ರಂದು ಆಸ್ಪತ್ರೆಯಿಂದ ನನಗೆ ಯಾವುದೇ ಎಮ್.ಎಲ್.ಸಿ ವರದಿ ಬಂದಿರುವುದಿಲ್ಲ. ಸಾಮಾನ್ಯವಾಗಿ ಎರಡೂ ವಾಹನಗಳು ಡಿಕ್ಕಿ ಹೊಡೆದ ಪಕ್ಷದಲ್ಲಿ ಎರಡೂ ವಾಹನಗಳಿಗೂ ಪೆಟ್ಟಾಗುತ್ತದೆ ಎಂದರೆ ಸಾಕ್ಷಿಯು ಒಂದು ವಾಹನ ಬಸ್ಸಾಗಿರುವ ಕಾರಣ ಹೆಚ್ಚಾಗಿ ಹೊಡೆತ ಬಿದ್ದಿರುವುದಿಲ್ಲ ಎಂದು ನುಡಿಯುತ್ತಾರೆ. ಬಸ್ ನ್ನು ವಶಕ್ಕೆ ಪಡೆದುಕೊಂಡಾಗ ಬಸ್‌ನ ಯಾವ ಭಾಗಕ್ಕೂ ಹೊಡೆತ ಬಿದ್ದಿರುವುದು ಕಂಡುಬಂದಿರುವುದಿಲ್ಲ. ಸಾಮಾನ್ಯವಾಗಿ ಬಸ್ ವೇಗವಾಗಿ ಬಂದು ವಾಹನಕ್ಕೆ ಡಿಕ್ಕಿ ಹೊಡೆದ ಪಕ್ಷದಲ್ಲಿ ಬಸ್ ಗೆ ಹೊಡೆತ ಬೀಳುತ್ತದೆ ಎಂದರೆ ಸರಿ. ಚಾಸಾ-1 ರವರು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಬಾಬ್ತು ಯಾವುದೇ ದಾಖಲಾತಿಯನ್ನು ನಾನು ಪಡೆದುಕೊಂಡಿರುವುದಿಲ್ಲ. ಚಾಸಾ-1 ರವರು ತಡವಾಗಿ ದೂರನ್ನು ನೀಡುತ್ತಿರುವ ಬಾಬ್ತು ಡಿಸ್ಚಾರ್ಜ್ ಸಮ್ಮರಿಯನ್ನು ನೀಡುವಂತೆ ನಾನು ಕೇಳಿರುವುದಿಲ್ಲ. ಚಾಸಾ-1 ರವರ ತಪ್ಪಿನಿಂದ ಅಪಘಾತ

ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಚಾಸಾ-1 ರವರ ತಪ್ಪಿನಿಂದ ಅಪಘಾತ ಸಂಭವಿಸಿರುವ ಕಾರಣ 17 ದಿನಗಳ ನಂತರ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರಕರಣದ ಬಾಬ್ತು KSRTC ನಿರ್ವಾಹಕರನ್ನು ವಿಚಾರಣೆ ಮಾಡಿರುವುದಿಲ್ಲ. ಸುನೀಲ್ ಪೂಜಾರಿ ಎಂಬುವವರನ್ನು ವಿಚಾರಣೆ ಮಾಡಿರುವುದಿಲ್ಲ. ಸದರಿಯವರನ್ನು ವಿಚಾರಣೆ ಮಾಡಿದ್ದಲ್ಲಿ ಪ್ರಕರಣದ ಕುರಿತು ಮಾಹಿತಿ ತಿಳಿದುಬರುತ್ತದೆ ಎಂಬ ಕಾರಣದಿಂದ ಅವರನ್ನು ಕೈ ಬಿಡಲಾಗಿರುತ್ತದೆ ಎಂದರೆ ಸರಿಯಲ್ಲ.

ಚಾಸಾ-1 ರವರಿಗೆ ಪರಿಹಾರ ಹಣವನ್ನು ಸಿಗುವಂತೆ ಮಾಡುವ ಕಾರಣದಿಂದ ಆರೋಪಿಯ ವಿರುದ್ಧ ಸುಳ್ಳು ದೂರನ್ನು ಸ್ವೀಕರಿಸಿ, ಸುಳ್ಳು ಪ್ರಕರಣವನ್ನು ದಾಖಲು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ, ವರದಿಯನ್ನು ಸಲ್ಲಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ಮೂಡಿಗೆರೆ ವೃತ್ತದಲ್ಲಿ ಬಸ್ ಬೈಕ್ ನ್ನು Overtake ಮಾಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ಬಸ್ ಗೆಂಡೇಹಳ್ಳಿಗೆ ಹೋಗುವ ರಸ್ತೆಯ ಕ್ರಾಸ್ ನಲ್ಲಿ ಬೈಕ್ ಬಂದು ಬಸ್ ನ ಚಕ್ರಕ್ಕೆ ವೇಗವಾಗಿ ಡಿಕ್ಕಿ ಪಡಿಸಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಬಸ್ ಮತ್ತು ಬೈಕ್ ನ್ನು ಅಮಾನತುಪಡಿಸುವ ಸಮಯದಲ್ಲಿ ಫೋಟೋವನ್ನು ತೆಗೆದಿರುತ್ತೇನೆ. ಆರೋಪಿಯ ವಿರುದ್ಧ ಯಾವುದೇ ಆರೋಪ ಸಾಬೀತಾಗದೇ ಇದ್ದರೂ ಸುಳ್ಳು ದೋ.ಪ.ಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.